3 ಗದಗ–ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರ, ಗದಗದ 2002–03ನೇ ಸಾಲಿನ ಲೆಕ್ಕಪರಿಶೋಧನಾ ವರದಿ

4 ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ ನವನಗರ, ಹುಬ್ಬಳ್ಳಿಯ 2002–03ನೇ ಸಾಲಿನ ಲೆಕ್ಕಪರಿಶೋಧನಾ ವರದಿ

5 ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿಯ 2002–03ನೇ ಸಾಲಿನ ಲೆಕ್ಕಪರಿಶೋಧನಾ ವರದಿ

6 ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರ, ರಾಯಚೂರು 2002–03ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ

7 ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆಯ 2003–04ನೇ ಸಾಲಿನ ವಾರ್ಷಿಕ ವರದಿ

8 ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು 2002–03ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ

ಶ್ರೀ ಪಿ ಜಿ ಆರ್ ಸಿಂಧ್ಯಾ (ಬೃಹತ್ ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಹಾಗೂ ಮೂಲಭೂತ ಸೌಕರ್ಯ ಅಭಿವೃದ್ಧಿ ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಅವರ ಪರವಾಗಿ

II 1980ರ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಅಧಿನಿಯಮ 25ರನ್ವಯ

1 ಅಚ್ಚುಕಟ್ಟು ಅಭಿವೃದ್ಧಿ ಪ್ರಾದಿಕಾರ ಕಾವೇರಿ ಜಲಾನಯನ ಯೋಜನೆಗಳು ಮೈಸೂರಿನ 2003–04ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನ ಶ್ರೀ ಪಿ ಜಿ ಆರ್ ಸಿಂಧ್ಯಾ (ಬೃಹತ್ ಹಾಗೂ ಮಧ್ಯಮ ಕೈಗಾರಿಕೆ, ಸಣ್ಣ ಕೈಗಾರಿಕೆ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿ ಸಚಿವರು) ಅವರು

III 1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತದ 2002–03ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ

ಶ್ರೀ ಪಿ ಜಿ ಆರ್ ಸಿಂಧ್ಯಾ (ಬೃಹತ್ ಹಾಗೂ ಮಧ್ಯಮ ಕೈಗಾರಿಕೆ, ಸಣ್ಣ ಕೈಗಾರಿಕೆ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿ ಸಚಿವರು) ಮಾನ್ಯ ಅಧ್ಯಕ್ಷರೆ (ಲೋಕೋಪಯೋಗಿ ಮತ್ತು ಇಂಧನ ಸಚಿವರು) ಪರವಾಗಿ

IV 1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಗುಲ್ಬರ್ಗಾ ವಿದ್ಯುತ್ ಸರಬರಾಜು ನಿಗಮ ನಿಯಮಿತದ 2002–03ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ವರದಿಯನ್ನು ಮಂಡಿಸುತ್ತೇನೆ

ಅಧ್ಯಕ್ಷರು ಮಂಡಿಸಲಾಯಿತು

4 ಅರ್ಜಿಗಳನ್ನು ಒಪ್ಪಿಸುವುದು

ಶ್ರೀ ಪ್ರಭಾಕರ ಬಂಗೇರ ಮಾನ್ಯ ಅಧ್ಯಕ್ಷರೆ ನನ್ನ ಹೆಸರಿನ ಮುಂದೆ ಇರುವಂತಹ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಶಿಬಾಡಿ ಗ್ರಾಮದಲ್ಲಿ ಪರಿಶಿಷ್ಟ ಜಾತಿಯ ರಸ್ತೆಗೆ ಡಾಂಬರೀಕರಣದ ಬಗ್ಗೆ ಸದನಕ್ಕೆ ಅರ್ಜಿಯನ್ನು ಒಪ್ಪಿಸುತ್ತಿದ್ದೇನೆ

ಅಧ್ಯಕ್ಷರು : ಒಪ್ಪಿಸಲಾಗಿದೆ

5 ಅಧ್ಯಕ್ಷರ ಅಪ್ಪಣೆ ಮೇರೆಗೆ

(1) ಶ್ರೀ ತಿಮ್ಮಪ್ಪನಾಯಕನ ಕೊಲೆ ಬಗ್ಗೆ ಹಾಗೂ ಇತರೆ ವಿಷಯಗಳ ಬಗ್ಗೆ ಸರ್ಕಾರದಿಂದ ಉತ್ತರ ಪಡೆದಿರುವ ಬಗ್ಗೆ

ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ ನಾವು ಈ ಹಿಂದೆ ಈ ಸದನದಲ್ಲಿ ಶ್ರೀ ತಿಮ್ಮಪ್ಪ ನಾಯಕನ ಕೊಲೆ ಬಗ್ಗೆ ಪ್ರಸ್ತಾಪ ಮಾಡಿದ್ದೆವು ಕಳೆದ 4 ದಿವಸಗಳಿಂದ ಆ ಕ್ಷೇತ್ರದ ಶಾಸಕರು ಭಿಕ್ಷೆ ಬೇಡುವ ರೀತಿಯಲ್ಲಿ ಕೇಳುವಂತೆ ಆಗಿದೆ ಮಾನ್ಯ ಅಧ್ಯಕ್ಷರೆ ಸಾಮಾನ್ಯವಾಗಿ ನಡೆದುಕೊಂಡು ಬಂದಿರುವ ಪದ್ಧತಿ ಪ್ರಕಾರ ಈ ತರಹ ಪ್ರಮುಖವಾದ ವಿಷಯಗಳು ಇದ್ದರೆ ತಕ್ಷಣ ಅದಕ್ಕೆ ಉತ್ತರ ಕೊಡಿಸುವಂತಹ ವ್ಯವಸ್ಥೆಯಾಗುತ್ತಿತ್ತು ಏಕೆ ಅದು ಆಗುತ್ತಿಲ್ಲ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ ಯಾವುದು ಪೆಂಡಿಂಗ್ ಇದೆ ಶೂನ್ಯವೇಳೆಯಲ್ಲಿ ಉತ್ತರ ಕೊಡುವುದು ಅದನ್ನು ಸರ್ಕಾರ ಕೊಡಬೇಕಲ್ಲಾ ಇವತ್ತು ಕೊನೆಯ ದಿವಸ ದಯಮಾಡಿ ಶ್ರೀ ತಿಮ್ಮಪ್ಪನಾಯಕನ ಕೊಲೆ ಬಗ್ಗೆ ಒಂದು ಹೇಳಿಕೆಯನ್ನು ಸರ್ಕಾರದ ಕಡೆಯಿಂದ ಕೊಡಿಸಿ

ಅಧ್ಯಕ್ಷರು ದಯಮಾಡಿ ಎಲ್ಲರೂ ಹೀಗೆ ಎದ್ದು ನಿಂತುಕೊಂಡರೆ ಹೇಗೆ? ಶ್ರೀ ತಿಮ್ಮಪ್ಪ ನಾಯಕನ ಕೊಲೆ ಮತ್ತು ಇತರೇ ಬೇರೆ ಬೇರೆ ವಿಷಯಗಳ ಸಂಬಂಧದಲ್ಲಿ ಸರ್ಕಾರ ಉತ್ತರ ಕೊಡುತ್ತದೆಂದು ನಾನು ಸಭೆಗೆ ತಿಳಿಸಲಾಗಿತ್ತು ಇಂದು ಕೊನೆಯ ದಿನ ಎಲ್ಲಾ ಸದಸ್ಯರು ಉತ್ತರ ಬಯಸುತ್ತಿದ್ದಾರೆ ದಯಮಾಡಿ ಈ ಸಭೆ ಮುಗಿಯುವುದರೊಳಗೆ ಮಾನ್ಯ ಸದಸ್ಯರಿಗೆ ಉತ್ತರ ಕೊಡಿಸುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಮಾನ್ಯ ಅಧ್ಯಕ್ಷರೆ ನನ್ನ ಕ್ಷೇತ್ರದಲ್ಲಿ ಜಯ ಸಾವಿನ ಪ್ರಕರಣದ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ ಕಳೆದ ಸೋಮವಾರವೇ ಉತ್ತರ ಕೊಡಬೇಕಾಗಿತ್ತು

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಮುಖ್ಯಮಂತ್ರಿಗಳೆ ಇಲ್ಲಿ ಕೆಲವು ಪ್ರಮುಖವಾದ ವಿಷಯಗಳ ಪ್ರಸ್ತಾಪವಾಗುತ್ತದೆ ತಕ್ಷಣ ಶೂನ್ಯವೇಳೆಯಲ್ಲಿ ಅದಕ್ಕೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ ಅಧ್ಯಕ್ಷರು ಉತ್ತರ ಕೊಡಿಸುತ್ತೇವೆಂದು ಹೇಳುತ್ತಾರೆ ಅಧಿಕಾರಿಗಳಾಗಲೀ ಮಂತ್ರಿಗಳಾಗಲೀ ಇದರ ಬಗ್ಗೆ ಏಕೆ ಸೀರಿಯಸ್ ಆಗಿ ತೆಗೆದುಕೊಳ್ಳುತ್ತಿಲ್ಲ ಎಂಬುದು ಗೊತ್ತಾಗುತ್ತಿಲ್ಲ ಏನೋ ಒಂದು ಜಾತ್ರೆ ನಡೆದುಕೊಂಡು ಹೋಗುವ ಹಾಗೆ ನಡೆದುಕೊಂಡು ಹೋಗುತ್ತಿದೆ ಸಾಮಾನ್ಯವಾಗಿ ಇಷ್ಟು ವರ್ಷ ತಮಗೂ ಅನುಭವ ಇದೆ ತಾವು ನೋಡಿದ್ದೀರಿ ತಕ್ಷಣ ಉತ್ತರ ಕೊಡುವುದಕ್ಕೆ ಆಗದಿದ್ದರೂ ಆಮೇಲೆ ಆದರೂ ಉತ್ತರ ಕೊಡುವುದು ಸ್ವಾಭಾವಿಕವಾಗಿತ್ತು ಯಾರೂ ಫಾಲೋ ಆಫ್ ಮಾಡುತ್ತಿಲ್ಲ ಹೇಳುವವರು ಕೇಳುವವರು ಇಲ್ಲ ಅಧ್ಯಕ್ಷರು ಅಪ್ಪಣೆ ಮಾಡಿದ ಮೇಲೂ ಸಹ ನಿನ್ನೆಯೂ ಪ್ರಸ್ತಾಪ ಮಾಡಿದರು, ಮೊನ್ನೆಯೂ ಪ್ರಸ್ತಾಪ ಮಾಡಿದರು, ಅವರು ಉತ್ತರ ಕೊಡಿಸುತ್ತೇನೆಂದು ಹೇಳಿದರು ಸರ್ಕಾರ